## ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ:712/2023

**ಸಾಕ್ಷಿಯನ್ನು ದಿಃ 20.06.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | | |
|---|---|---|---|
| ಹೆಸರು | ಬಸವರಾಜು | ಸಿಡಬ್ಲ್ಯೂ:1 | ಪಿಡಬ್ಲ್ಯೂ:1 |
| ತಂದೆಯ ಹೆಸರು | ಚಾಮನಾಯಕ | | |
| ವಯಸ್ಸು | 42 ವರ್ಷ | | |
| ಉದ್ಯೋಗ | ವ್ಯವಸಾಯ | | |
| ವಾಸಸ್ಥಳ | ಅನ್ನರಾಯನಹಳ್ಳಿ | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ಚಾಮನಾಯಕ ಅವರು ನನ್ನ ತಂದೆಯಾಗಿರುತ್ತಾರೆ. ಅವರು ದಿಃ 04.08.2023 ರಂದು ಆದ ಅಪಘಾತದಲ್ಲಿ ಮೃತ ಪಟ್ಟಿರುತ್ತಾರೆ. ಅವರು ಆ ದಿನ ಟಿ.ವಿ.ಎಸ್ ಗಾಡಿಯಲ್ಲಿ ಬಿಳಿಕೆರೆಯಿಂದ ಬರುವಾಗ ರಸ್ತೆ ದಾಟಲು ಅಂದನಹಳ್ಳಿ ಗೇಟ್ ಹತ್ತಿರ ನಿಂತಿದ್ದಾಗ ಅಶೋಕ್ ಲೇ ಲ್ಯಾಂಡ್ ಗೂಡ್ಸ್ ಗಾಡಿ ಬಿಳಿಕೆರೆ ಕಡೆಯಿಂದ ಹಿಂದಿನಿಂದ ಬಂದು ನಿಂತಿದ್ದ ನಮ್ಮ ತಂದೆಗೆ ಡಿಕ್ಕಿ ಪಡಿಸಿರುತ್ತದೆ. ಸದರಿ ವಿಚಾರವನ್ನು ಪಕ್ಕದ ಮನೆಯವರು ಫೋನ್ ಮಾಡಿ ತಿಳಿಸಿದ ಮೇರೆಗೆ ನಾನು ಕೆ.ಆರ್ ಆಸ್ಪತ್ರೆಗೆ ಹೋಗಿರುತ್ತೇನೆ. ಅಲ್ಲಿ ಆಗುವುದಿಲ್ಲವೆಂದು ಹೇಳಿದ್ದಕ್ಕೆ ಜೆ.ಎಸ್.ಎಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಸೇರಿಸಿದ್ದೆವು.

ಅಪಘಾತದ ವಿಚಾರವಾಗಿ ನಾನು ದೂರನ್ನು ಕೊಟ್ಟಿದ್ದೆನೆ. ಸದರಿ ದೂರನ್ನು ನಿಪಿ. 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 1(ಎ) ಎಂದು ಗುರುತಿಸಲಾಯಿತು. ಅಪಘಾತವಾದ 3 ದಿನಗಳ ನಂತರ ಅಂದರೆ ದಿಃ 07.08.2023 ರಂದು ನನ್ನ ತಂದೆ ತೀರಿಕೊಂಡರು. ಅವರ ಮರಣದ ನಂತರ ಪುನಃ ನಾನು ದೂರನ್ನು ಕೊಟ್ಟಿದ್ದೇನೆ. ಸದರಿ ದೂರನ್ನು ನಿಪಿ. 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 2(ಎ) ಎಂದು

ಗುರುತಿಸಲಾಯಿತು. ತಂದೆ ಹೋಗುತ್ತಿದ್ದ ಗಾಡಿ ಸಂಖ್ಯೆ ಕೆಎ 45 ಕ್ಯೂ 5543 ಆಗಿರುತ್ತದೆ. ನಮ್ಮ ತಂದೆಗೆ ಡಿಕ್ಕಿ ಪಡಿಸಿದ ವಾಹನ ಸಂಖ್ಯೆ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**ಪಾಟೀಸವಾಲು ಸಸಅ ರವರಿಂದಃ–**

ನಿಮ್ಮ ತಂದೆ ಓಡಿಸುತ್ತಿದ್ದ ಕೆಎ 45 ಕ್ಯೂ 5534 ಆಗಿರುತ್ತದೆ ಎಂದರೆ ಸರಿ. ಅಶೋಕ್ ಲೇ ಲ್ಯಾಂಡ್ ಲಾರಿಯ ನಂ. ಕೆಎ 01 ಡಿ 4598 ಆಗಿತ್ತು ಎಂದರೆ ಸರಿ. ಗೂಡ್ಸ್ ಗಾಡಿಯ ಚಾಲಕ ಅತಿವೇಗ ಮತ್ತು ಅಜಾರೂಕತೆಯಿಂದ ಓಡಿಸಿಕೊಂಡು ಬಂದು ನನ್ನ ತಂದೆಗೆ ಡಿಕ್ಕಿ ಪಡಿಸಿದ ಕಾರಣ ಈ ಅಪಘಾತ ಉಂಟಾಗಿರುತ್ತದೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಸಿ.ಎಸ್.ಎಂ. ವಕೀಲರಿಂದಃ**

ಅಪಘಾತವಾದ ಸಮಯದಲ್ಲಿ ನಾನು ಊರಿನಲ್ಲಿ ಇದ್ದೆ. ಅಪಘಾತ ಆದ ವಿಚಾರ ಸಂಜೆ 6.00 ಗಂಟೆ ಸಮಯದಲ್ಲಿ ಚನ್ನಪ್ಪ ಎಂಬುವವರು ಫೋನ್ ಮಾಡಿದ ನಂತರ ನನಗೆ ಗೊತ್ತಾಯಿತು. ಅವರು ಹೇಳಿದ ಮೇರೆಗೆ ನಾನು ದೂರು ಕೊಟ್ಟಿರುತ್ತೇನೆ ಎಂದರೆ ಸರಿ. ಅಪಘಾತ ಆಗುವ ಸಮಯದಲ್ಲಿ ಕತ್ತಲಾಗಿತ್ತು ಎಂದರೆ ಸರಿಯಲ್ಲ. ಆ ದಿನ ನನ್ನ ತಂದೆ ಬಿಳಿಕೆರೆಗೆ ಗೊಬ್ಬರವನ್ನು ತರಲು ಹೋಗಿದ್ದು ಸದರಿ ವಿಚಾರವನ್ನು ದೂರಿನಲ್ಲಿ ಹೇಳಿದ್ದೇನೆ. ಇದೆ ಮೊದಲ ಬಾರಿ ಈ ವಿಚಾರ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂದೆಗೆ ಅಪಘಾತ ಆಗುವ ಸಮಯದಲ್ಲಿ 62 ವರ್ಷ ವಯಸ್ಸಾಗಿತ್ತು. 25 ಕೆ.ಜಿ ಗೊಬ್ಬರವನ್ನು ನಮ್ಮ ತಂದೆ ಟಿ.ವಿ.ಎಸ್ ಮೊಟರ್ ಸೈಕಲ್ ನಲ್ಲಿ ತರುತ್ತಿದ್ದರು. ನನ್ನ ತಂದೆಗೆ ವಯಸ್ಸಾಗಿದ್ದು, ಆ ಸಮಯದಲ್ಲಿ ಕತ್ತಲಾದ ಕಾರಣ ಅವರಿಗೆ ಕಾಣಿಸಿರಲಿಲ್ಲ ಎಂದರೆ ಸರಿಯಲ್ಲ. ಆ ರೀತಿ ನಮ್ಮ ತಂದೆಗೆ ಕಣ್ಣು ಕಾಣಿಸದ

ಕಾರಣ ಅವರ ಅಜಾಗರೂಕತೆಯಿಂದ ಅಪಘಾತ ಆಗಿದೆ ಎಂದರೆ ಸರಿಯಲ್ಲ. ನನ್ನ ತಂದೆ ಹೆಲ್ಮೇಟ್ ಹಾಕಿದ್ದರೊ ಇಲ್ಲವೊ ಎಂದು ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಹೆಲ್ಮೇಟ್ ರಸ್ತೆಯ ಪಕ್ಕದಲ್ಲಿ ಬಿದ್ದಿತ್ತು. ನನ್ನ ತಂದೆಯ ನಿರ್ಲಕ್ಷತೆಯಿಂದ ಸದರಿ ಅಪಘಾತ ಆಗಿದೆ ಎಂದರೆ ಸರಿಯಲ್ಲ.

ದೂರಿನಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ. ನಾನು ಅಪಘಾತದ ಪರಿಹಾರ ಸಂಬಂಧ ಪ್ರಕರಣ ದಾಖಲು ಮಾಡಿರುತ್ತೇನೆ. ಆದ ಕಾರಣ ನಾನು ಸುಳ್ಳು ದೂರು ಕೊಟ್ಟು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನ ನಿರ್ಲಕ್ಷತನ ಮತ್ತು ಅಜಾಗರೂಕತೆಯಿಂದ ಸದರಿ ಅಪಘಾತ ಆಗದಿದ್ದರೂ, ನಾನು ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರಿಗೆ ತಿಳಿಸಿದ ಮೇರೆಗೆ ದೂರಿಗೆ ಸಹಿ ಮಾಡಿರುತ್ತೇನೆ.

**ಮರುವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.